

ಅದೂ ಕಷ್ಟದಲ್ಲಿ. ಕೂಡಲೇ ಮತ್ತೊಮ್ಮೆ ಡಾಕ್ಟರನ್ನು ಕರೆಯಲು ಓಡಿದ.

ಆದರೆ, ತಿರುಗಿ ಬರುವಾಗ ಕೆಲಸ ಮುಗಿದಿತ್ತು. ಉಸಿರಾಟ ನಿಂತಿತ್ತು ಮತ್ತು ಕಣ್ಣು ಗುಡ್ಡೆಗಳೆರಡೂ ಮೇಲಕ್ಕೆ ಸಿಕ್ಕಿ ಹಾಕಿಕೊಂಡಾಗಿತ್ತು. ಇವರು ಸತ್ತಿದ್ದಾರೆ ಎನ್ನುವುದನ್ನು ಖಚಿತಪಡಿಸುವುದಕ್ಕೇ ತಾನು ಬಂದೆನೋ ಎನ್ನುವಂತೆ, 'ಆಯ್ತು... ಎಲ್ಲ ಮುಗಿಯಿತು...' ಎಂದಿದ್ದರು ಡಾಕ್ಟರು. ಅಮ್ಮ ಮಾತ್ರ ಅದೇ ನಿರ್ಲಿಪ್ತತೆಯನ್ನೇ ತೋರಿಸುತ್ತ ಕುಳಿತಿದ್ದಳು. ಡಾಕ್ಟರರ ಮಾತು ಕೇಳಿಯೂ ಅವಳ ವರ್ತನೆಯೇನೂ ಬದಲಾಗಲಿಲ್ಲ.

'ಅಮ್ಮ...' ಹುದುಗಿದ ಸ್ವರದಲ್ಲಿ ಇವ ಅಮ್ಮನನ್ನು ಕರೆದ. ಇಲ್ಲ... ಆಕೆಯಿಂದ ಉತ್ತರವೇ ಇಲ್ಲ. ಹೆದರಿದ ಇವ ಅವಳ ಭುಜ ಹಿಡಿದು ಅಲುಗಾಡಿಸಿದರೆ ತುಸುವೇ ಕತ್ತೆತ್ತಿ ನೋಡಿದ್ದಳು. ಸ್ವಲ್ಪ ಧೈರ್ಯ ಬಂತು.

'ಅಲ್ಲ ಅಮ್ಮ... ಡಾಕ್ಟರರು ಆ ದಿನವೇ ಹೇಳಿದ್ದರಲ್ಲ. ಇನ್ನೇನೂ ಮಾಡಲು ಸಾಧ್ಯವಾಗದು ಎಂದು' ಎದೆಯಾಳದಿಂದ ಉಕ್ಕುತ್ತಲಿದ್ದ ಅಳುವನ್ನು ತಡೆದುಕೊಳ್ಳುತ್ತ ಅಮ್ಮನನ್ನು ಸಮಾಧಾನಪಡಿಸುವ ಪ್ರಯತ್ನ ಮಾಡಿದ್ದ.

ಇವರ ಹಾಸಿಗೆಯನ್ನು ತೆರವು ಮಾಡಿ ಆಗಲೇ ಕಾಯುತ್ತಿದ್ದ ಇನ್ನೊಬ್ಬ ಪೇಷಂಟಿಗೆ ಕೊಡಿಸಬೇಕೆನ್ನುವ ಅರ್ಜೆಂಟಿನಲ್ಲಿದ್ದ ಆಸ್ಪತ್ರೆಯವರ ಗಡಿಬಿಡಿ ಪ್ರಾರಂಭವಾಗಿತ್ತು. ಇವರ ದುಃಖವನ್ನು ಗಣನೆಗೇ ತೆಗೆದುಕೊಳ್ಳದ ನರ್ಸುಗಳ ಆತುರ, ದಾದಿಯರ ಓಡಾಟ ಇವನನ್ನೂ ಗಲಿಬಿಲಿಗೊಳ್ಳುವಂತೆ ಮಾಡಿತ್ತು. ಡಿಪ್ರೆಶನ್ನಿಗೆ ಹೋಗುತ್ತಾಳೇನೋ ಎನ್ನುವ ಹೆದರಿಕೆಯಿದ್ದ ಅಮ್ಮನನ್ನು ನೋಡಿಕೊಳ್ಳಬೇಕು. ಬಾಕಿಯಿರುವ ಬಿಲ್ಲನ್ನು ಕಟ್ಟಬೇಕು. ಅಪ್ಪನ ಹೆಣವನ್ನು ಎತ್ತಬೇಕು. ಗೊಂದಲದಲ್ಲಿ ಬಿದ್ದಿದ್ದ.

ಅಷ್ಟರಲ್ಲಿ ಆಸ್ಪತ್ರೆಯ ಸಿಬ್ಬಂದಿಯೇ ಒಬ್ಬ ಬಿಲ್ಲನ್ನು ಹಿಡಿದುಕೊಂಡು ಬಂದಿದ್ದ. ಬಾಕಿಯಿದ್ದ ಬಿಲ್ಲನ್ನು ಇವನ